ಮನೆಯ ಹಾಲ್ ಪ್ರವೇಶಿಸುತ್ತಿದ್ದಂತೆಯೇ ವಿದ್ಯುತ್ ಹರಿಯುತ್ತಿರುವ ತಂತಿಯ ಮೇಲೆ ಕಾಲಿಟ್ಟ ಅನುಭವ! ಬಾಗಿಲು ತೆರೆದಿದ್ದ ಅವ್ವನ ಮುಖವನ್ನು ನೋಡುತ್ತಲೇ, ಒಳಕ್ಕೆ ಅಡಿಯಿಟ್ಟು, ಶೂಗಳನ್ನು ಮೂಲೆಯಲ್ಲಿ ಕಳಚಿ, ಸೋಫಾ ಕಡೆಗೆ ತಿರುಗಿದ್ದೆನಷ್ಟೇ; ಶಾಕ್ ಹೊಡೆದು ಗರಬಡಿದಂತಾದೆ. ಕಾರಣ, ಒಂದು ವರ್ಷದ ಹಿಂದೆ ನನ್ನ ಮನದನ್ನೆಯಾಗಿದ್ದ, ನನ್ನ ಬದುಕಿನ ಒಂದು ಪ್ರಮುಖ ಭಾಗವೇ ಆಗಬೇಕಿದ್ದ, ನನ್ನ ಹಲವಾರು ದಿನಗಳ ನಿದ್ದೆಗೆಡಿಸಿದ್ದ, ನನ್ನ ಕೋಟಿ ಕನಸುಗಳ ಕೇಂದ್ರಬಿಂದುವಾಗಿದ್ದ, ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಎಲ್ಲವೂ ಆಗಬೇಕಿದ್ದ ಆ ಸುಂದರ ಹುಡುಗಿ, ಈಗ ಇನ್ನೊಬ್ಬನ ಪತ್ನಿಯಾಗಿ ನಮ್ಮ ಮನೆಯ ಸೋಫಾದ ಮೇಲೆ ಕುಳಿತಿದ್ದಳು!

ಆಕೆ ನಮ್ಮ ಮನೆಗೆ ಬಂದಿದ್ದನ್ನು ನೋಡಿ ಅವ್ವನಿಗೆ ಇನ್ನಿಲ್ಲದ ಸಂಭ್ರಮ. ತನ್ನನ್ನು ತಾನು ಉದ್ವೇಗದಿಂದ ಸಂಭಾಳಿಸಿಕೊಳ್ಳುತ್ತ, ''ಇನ್ನೇನೈತಿ, ರವಿಯೂ ಬಂದಾನ; ಅವಂಗ ಕ್ಲಾಸು ಲಗೂ ಮುಗೀತು ಅನ್ನಿಸ್ತದ... ಅಲ್ಲೇನೋ ರವಿ? ನೀವು ಚಾ ತಗೋರಿ... ಆರಿ ಹೋಗ್ತದ... ಆರಿದ್ಮ್ಯಾಲ ಚಾ ಕುಡಿದ್ರ ಏನ್ ಚೆಂದ್ ಐತಿ?''

ಅಂದಹಾಗೆ, ಬಂದಿರುವ ಅತಿಥಿಗಳ ಸತ್ಕಾರ ಮಾಡುವುದರಲ್ಲಿ ನನ್ನ ಅವ್ವ ಎತ್ತಿದ ಕೈ. ಅದೆಷ್ಟು ಖುಷಿಪಡುತ್ತಾಳೆಂದರೆ, ಸಕಲವನ್ನೂ ನೀಡುವ ಪರಮಾತ್ಮನೇ ಮನೆಯ ಬಾಗಿಲಿಗೆ ಬಂದಷ್ಟು! ಅದೇ ನನ್ನ ಅವ್ವನ ಗೆಲುವಿನ ಗುಟ್ಟು; ನಮ್ಮ ಸಂಸಾರದ ಸಂತೋಷದ ರಹಸ್ಯ. ಸಣ್ಣಸಣ್ಣ ವಿಷಯದಲ್ಲಿಯೂ ಸಂತೋಷದ ರಹಸ್ಯ ಅಡಗಿರುತ್ತದೆ; ನಿಜ ಹೇಳಬೇಕೆಂದರೆ ಸಣ್ಣ ವಿಷಯಗಳಲ್ಲಿಯೇ ಹೆಚ್ಚಿನ ಸಡಗರ ಅವಿತಿರುತ್ತದೆ ಎನ್ನುವುದು ನನ್ನವ್ವನ ಅಭಿಪ್ರಾಯ; ಅದೇ ರೀತಿಯಲ್ಲಿ ಆಕೆ ನಡೆದುಕೊಳ್ಳುತ್ತಾಳೆ; ನಮಗೂ (ನನಗೆ ಮತ್ತು ನನ್ನ ಅಪ್ಪನಿಗೆ) ಅದನ್ನೇ ಆಕೆ ಕಲಿಸಿದ್ದಾಳೆ. 'ಕೆಟ್ಟದ್ದೇನಾರ ಆತು ಅಂದ್ರ ಮರ್ತುಬಿಡು; ಮನಸ್ನ್ಯಾಗ ಇಟ್ಕೋಬ್ಯಾಡ... ಹಂಗ ಚೆಲೋದಿತ್ತಂದ್ರ ಯಾವತ್ತೂ ಮರೀಬ್ಯಾಡ...' ಇದು ನನ್ನವ್ವನ ಉಪದೇಶ. 'ಆಕೆ ಚೆನ್ನಾಗಿರೋದ್ರಿಂದಲೇ ನನ್ನಿಂದ ಅವಳನ್ನು ಮರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ' ಎನ್ನುವುದನ್ನು ನನ್ನವ್ವನಿಗೆ ಹೇಗೆ ಹೇಳಲಿ!

ನಾನು ನಿಂತಲ್ಲಿಯೇ ನಿಂತಿದ್ದೆ. ಹಿಂದಿನ ಕೆಲವು ನೆನಪುಗಳು ಧುತ್ತೆಂದು ಸ್ಮೃತಿಪಟಲಗಳಿಗೆ ಅಪ್ಪಳಿಸಿದಾಗ ಶಾಕ್ ಆಗುವುದು ಸಹಜವೇ ಬಿಡಿ. ಅವ್ವ ಸಡಗರದಿಂದಲೇ ತನ್ನ ಮಾತನ್ನು ಮುಂದುವರಿಸಿದಳು.

''ರವಿ, ಈಕೀ ಯಾರಂತ ಗೊತ್ತಾತೇನು? ನೀನು ನೋಡಿರಾಂಗಿಲ್ಲ ಬಿಡು; ಹೈದರಾಬಾದ್‌ನಾಗ ಚುರುಮುರಿ ಮಾಮಾ (ಅವರೇನೂ ಚುರುಮುರಿ ಅಂಗಡಿ ಇಟ್ಟಿಲ್ಲ; ಅವರಪ್ಪ ಅದೇ ಬ್ಯುಸಿನೆಸ್ ಮಾಡ್ತಿದ್ದರು ಮತ್ತು ಅವರ ಚುರುಮುರಿ ಅಂಗಡಿ ತುಂಬಾ ಫೇಮಸ್ ಆಗಿತ್ತು; ಚಿಕ್ಕ ಹುಡುಗನಾಗಿದ್ದಾಗ ಮಾಮನೂ ತನ್ನ ಅಪ್ಪನ ಜೊತೆ ಮಂಡಕ್ಕಿ ಮಾರಾಟ ಮಾಡ್ತಿದ್ದರು. ಅದರಿಂದಾಗಿ ಆ ಮಾಮಾನೂ ಅದೇ ಹೆಸರಿನಿಂದ ಕರೆಯಲ್ಪಡುತ್ತಾರೆ, ಸಂಬಂಧಿಕರ ಬಳಗದಲ್ಲಿ) ಅದಾರಲ್ಲ, ಅವರ ಹೆಂಡ್ತೀ ತಂಗೀ ಮಗಳು ಈಕಿ. ಹೆಸ್ರು ಕಾವ್ಯಾ. ನೀನ್ ಈಕಿನ ನೋಡಿರಾಂಗಿಲ್ಲ ಬಿಡು. ಈಕಿ ಹೋದ್ ತಿಂಗ್ಳೇ ಧಾರವಾಡಕ್ಕ ಬಂದಾಳ. ಒಂದ್ ಫೋನ್ ಮಾಡಿಲ್ಲ ನೋಡ... ಮೊನ್ನಿ ಚುರುಮುರಿ ಮಾಮಾ ಅತ್ತಿ ಫೋನ್ ಮಾಡಿದ್ರಲ್ಲ, ಆಗ ವಿಷ್ಯಾ ತಿಳೀತು. ಈಕಿದ್ ಫೋನ್ ನಂಬರ್ ಇಸ್ಕೊಂಡಿದ್ನಿ. ನಿನ್ನಿ ಈಕಿಗ್ ಫೋನ್ ಹಚ್ಚಿ ಬರಾಕ್ ಹೇಳಿದ್ನಿ; ಇವತ್ ಬಂದಾಳ ನೋಡು...''

ನನಗೆ ಮೊದಲೇ ಈಕೆಯ ಪರಿಚಯ ಇದೆ ಎನ್ನುವುದನ್ನು ನಾನು ಅವ್ವನಿಗೆ ತಿಳಿಸಲಿಲ್ಲ. ಇವಳ ಬಗ್ಗೆ ನಾನು ಅವ್ವನ ಬಳಿ ಅಥವಾ ಅಪ್ಪನ ಬಳಿಯಲ್ಲಿ ಯಾವತ್ತೂ ಮಾತಾಡಿದ್ದಿಲ್ಲ. ನನ್ನ ಹೃದಯಕ್ಕುಂಟಾಗಿದ್ದ ಗಾಯವನ್ನು ನಾನ್ಯಾವತ್ತೂ ಅವ್ವನಿಗೆ ತೋರಿಸಿರಲಿಲ್ಲ; ಅದರ ಬಗ್ಗೆ